**೪ (೧) (ಬಿ) (xiii): ರಿಯಾಯತಿ ಮತ್ತು ಪರವಾನಗಿಯನ್ನು ಅಧಿಕೃತವಾಗಿ ಪಡೆದ ಫಲಾನುಭವಿಗಳ ವಿವರಗಳು:**

- ಪ್ರತಿಯೊಬ್ಬ ಪಜಾ.ಪ.ಪಂ.ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ. ೬೦೦.೦೦ನ್ನು ಎ.ಬಿ.ಎಲ್. ಚಾರ್ಜ ಎಂದು ನೀಡಲಾಗುತ್ತಿದ್ದು, ಸಮಾಜ ಕಲ್ಯಾಣ ಇಲಾಖೆಯು ರೂ. ೫೧೦.೦೦ ನ್ನು ಶಿಷ್ಯವೇತನದ ರೂಪದಲ್ಲಿ ಮರುಪಾವತಿಸಲಾಗುತ್ತದೆ.
- ಪಜಾ.ಪ.ಪಂ.ವಿದ್ಯಾರ್ಥಿ ಪಿಹೆಚ್.ಡಿ. ಪದವಿಗೆ ನೋಂದಾಯಿಸಿದಾಗ ಪ್ರತಿ ವಿದ್ಯಾರ್ಥಿಗೆ ರೂ.೨,೨೦೦.೦೦ ಪ್ರತಿ ತಿಂಗಳಿಗೂ ಹಾಗೂ ಸಾದಿಲ್ವಾರು ವೆಚ್ಚಕ್ಕೆ ರೂ. ೨,೫೦೦.೦೦ ವಾರ್ಷಿಕವಾಗಿ ೩ ವರ್ಷಗಳವರೆಗೆ ಧನಸಹಾಯ ನೀಡಲಾಗುತ್ತಿದೆ ಹಾಗೂ ಎಂ.ಫಿಲ್. ಮತ್ತು ಪ್ರಿ. ಪಿಹೆಚ್. ಡಿ. ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳಿಗೆ ರೂ. ೨,೦೦೦.೦೦ ಮತ್ತು ವಾರ್ಷಿಕ ಸಾದಿಲ್ವಾರು ರೂ. ೨,೫೦೦.೦೦ ನ್ನು ನೀಡಲಾಗುತ್ತದೆ.
- ಪಜಾ.ಪ.ಪಂ. ದ ಸ್ನಾ ತಕೋತ್ತರ ವಿಧ್ಯಾರ್ಥಿಗಳು ಹಾಗೂ ಶಿಕ್ಷಕರಿಗೆ ಸಮ್ಮೇಳನಗಳಲ್ಲಿ ಭಾಗವಹಿಸಲು ಪ್ರವಾಸಭತ್ಯ ನೀಡಲಾಗುತ್ತದೆ.
- ಸ್ನಾತಕೋತ್ತರ ಪರೀಕ್ಷೆಯ ಅಂತಿಮ ವರ್ಷದಲ್ಲಿ ( ಡಿಪ್ಲೋಮಾ ಹಾಗೂ ಎಂ.ಫಿಲ್. ಒಳಗೊಂಡಂತೆ ಪ್ರಥಮ ವರ್ಗದಲ್ಲಿ ಉತ್ತೀರ್ಣರಾದ ಪಜಾ.ಪ.ಪಂ.ವಿದ್ಯಾರ್ಥಿಗಳಿಗೆ ರೂ. ೧೦೦೦.೦೦ ನಗದು ಹಣ ವಿತರಿಸಲಾಗುತ್ತದೆ.
- ಪಜಾ.ಪ.ಪಂ.ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯತಿ ನೀಡಲಾಗುತ್ತಿದೆ. ಜನರಲ್ ಮೆರಿಟ್ ಹೊರತುಪಡಿಸಿ ಇನ್ನಿತರ ಕ್ಯಾಟಗರಿಯ .ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ವಿನಾಯತಿ ನೀಡಲಾಗುತ್ತಿದೆ.
- ಪ್ರತಿಯೊಂದು ವಿಭಾಗದಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳು ಎಂ.ಫಿಲ್., ಪ್ರಿ. ಪಿಹೆಚ್. ಡಿ. ಮತ್ತು ಪಿಹೆಚ್. ಡಿ. ಮಾಡಲು ಅನುವಾಗುವಂತೆ ರೂ. ೧,೬೦೦.೦೦ ಮಾಸಿಕ ಹಾಗೂ ರೂ. ೨,೦೦೦.೦೦ ವಾರ್ಷಿಕ ಸಾದಿಲ್ವಾರು ವೆಚ್ಚಕ್ಕಾಗಿ ಮೂರು ವರ್ಷಗಳವರೆಗೆ ರೀಸರ್ಚ ಸ್ಟುಡೆಂಟಶಿಪ್ ನೀಡಲಾಗುತ್ತದೆ.
- ಪ್ರಥಮ ಮತ್ತು ಅಂತಿಮ ವರ್ಷಗಳಲ್ಲಿ ಪ್ರವೇಶ ಪಡೆದ ಅತಿ ಹೆಚ್ಚು ಅಂಕಪಡೆದೆ ವಿದ್ಯಾರ್ಥಿಗಳಿಗೆ ರೂ. ೧,೦೦೦.೦೦ ವಿಷಯ ಶಿಷ್ಯವೇತನ ನೀಡಲಾಗುತ್ತದೆ.